Rotary ರೋಟರಿ **ಐಸಿರಿ** ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD


Rtn. Francesco Arezzo
R.I. President


Rtn. K. Palaksha
District Governor

# ಐಶ್ವರ್ಯ

ಸಂಪುಟ: 04 ಸಾಪ್ತಾಹಿಕ ಸಂಚಿಕೆ : 5
ದಿನಾಂಕ: 05.08.2025


Rtn. Anil Kumar
President


Rtn. Krishnappa
Secretary

## ಮಾತು ಕಡಿಮೆ – ಕೆಲಸ ಜಾಸ್ತಿ ಆದಾಗ ದೇಶ ಉದ್ಧಾರ ಆಗಲು ಸಾಧ್ಯ – ಶ್ರೀ ಕೇಶವ ಕೋಟ್ಯಾನ್



ನಾವೆಲ್ಲರೂ ಮಾತು ಕಡಿಮೆ ಮಾಡಿ ಕೆಲಸ ಜಾಸ್ತಿ ಮಾಡಿದಾಗ ದೇಶ ಉದ್ಧಾರವಾಗುತ್ತದೆ ಎಂದು 80 ಬಡಗಬೆಟ್ಟು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ಕೇಶವ ಕೋಟ್ಯಾನ್ ಅಭಿಪ್ರಾಯಪಟ್ಟರು. ಅವರು ಆಗಸ್ಟ್ 3ನೇ ತಾರೀಕು, ಭಾನುವಾರ ಪೂರ್ವಾಹ್ನ, ಒಡಿಯೂರು ಶ್ರೀ ಗ್ರಾಮ ವಿಕಾಸ ಯೋಜನೆ ಉಡುಪಿ ವಲಯ ಕಬ್ಯಾಡಿ ಘಟಸಮಿತಿ, 80 ಬಡಗಬೆಟ್ಟು ಗ್ರಾಮ ಪಂಚಾಯತ್ ಉಡುಪಿ, ರೋಟರಿ ಐಸಿರಿ ಪರ್ಕಳ, ರೋಟರಿ ಸಮುದಾಯದಳ ಪರ್ಕಳ, 80 ಬಡಗಬೆಟ್ಟು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ ಮತ್ತು 80 ಬಡಗಬೆಟ್ಟು ಗ್ರಾಮದ ಅಂಗನವಾಡಿ ಕೇಂದ್ರಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ **ಬೃಹತ್ ಸ್ವಚ್ಛತಾ ಕಾರ್ಯಕ್ರಮ**ವನ್ನು, 80 ಬಡಗಬೆಟ್ಟು ಗ್ರಾಮ ಪಂಚಾಯತ್ ನವೀಕೃತ ಸಭಾಂಗಣದಲ್ಲಿ ದೀಪಬೆಳಗಿಸಿ ಉದ್ಘಾಟಿಸಿ, ಸಭಿಕರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಸಂಪೂರ್ಣ ಕಾರ್ಯಕ್ರಮದಲ್ಲಿ ಸಮಯ ಪಾಲನೆಗೆ ಮಹತ್ವ ನೀಡಿರುವುದು, ಸಭಾ ಕಾರ್ಯಕ್ರಮವೂ ಸಮಯಕ್ಕೆ ಸರಿಯಾಗಿ ಆರಂಭವಾದುದನ್ನು ಶ್ಲಾಘಿಸಿ, ಸ್ವಚ್ಛ ಭಾರತ್ ಅಭಿಯಾನಕ್ಕೆ ಪೂರಕವಾದ ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ನಮ್ಮ ಗ್ರಾಮದಲ್ಲಿ ಆಯೋಜಿಸಿರುವುದಕ್ಕೆ ಸಂಘಟಕರಿಗೆ ಅಭಿನಂದಿಸಿದರು.

ಒಡಿಯೂರು ಶ್ರೀ ಗ್ರಾಮ ವಿಕಾಸ ಯೋಜನೆ ಉಡುಪಿ ವಲಯ ಅಧ್ಯಕ್ಷರೂ, ರೋಟರಿ ಐಸಿರಿ ಸ್ಥಾಪಕ ಅಧ್ಯಕ್ಷರೂ ಆಗಿರುವ ರೊ. ಕೆ. ಪ್ರಭಾಕರ ಶೆಟ್ಟಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಮನುಷ್ಯನ ಹೃದಯ, ಮನಸ್ಸು, ದೇಹ ಸ್ವಚ್ಛವಾಗಿರುವುದರಿಂದಲೇ ಮನೆ, ಊರು, ಸುತ್ತಮುತ್ತಲಿನ ಪ್ರದೇಶವೂ ಸ್ವಚ್ಛವಾಗಿರಬೇಕೆನ್ನುವ ಜಾಗೃತಿಯೂ ಎಲ್ಲರಲ್ಲಿ ಮೂಡುತ್ತದೆ ಎಂದರು.

ರೋಟರಿ ಐಸಿರಿಯ ಅಧ್ಯಕ್ಷ ರೊ. ಅನಿಲ್‌ಕುಮಾರ್ ಮಾತನಾಡಿ, ಒಡಿಯೂರು ಸಂಸ್ಥೆಯಿಂದ ಏಕಕಾಲದಲ್ಲಿ 365 ಕಡೆಗಳಲ್ಲಿ ಬೃಹತ್ ಸ್ವಚ್ಛತಾ ಅಭಿಯಾನ ನಡೆಯುತ್ತಿರುವುದು ಹೆಮ್ಮೆಯ ವಿಷಯ. ಸಂಘ ಸಂಸ್ಥೆಗಳು ಒಂದು ದಿನ ಸ್ವಚ್ಛತಾ ಕಾರ್ಯಕ್ರಮ ಮಾಡಿ ಜನ ಜಾಗೃತಿ ಮೂಡಿಸಿದರೆ, ಪ್ರತಿಯೊಬ್ಬರೂ ಇದನ್ನು ಪ್ರತಿದಿನ ಪಾಲಿಸಬೇಕು. ಮಕ್ಕಳಲ್ಲಿಯೂ ಸ್ವಚ್ಛತೆಯ ಬಗ್ಗೆ, ರಸ್ತೆಗೆ ಕಸ ಹಾಕದಿರುವಂತೆ ಜಾಗೃತೆ ಮೂಡಿಸಬೇಕೆಂದು ಕರೆ ನೀಡಿದರು.

ಬದಲಾವಣೆ ನಮ್ಮಿಂದಲೇ ಆರಂಭವಾಗಬೇಕು. ಸ್ವಚ್ಛತೆಯ ಬಗ್ಗೆ ಜನರಲ್ಲಿ ಜಾಗೃತೆ ಹೆಚ್ಚುತ್ತಿದೆ. ಅಂಗಡಿಗೆ ಬರುವಾಗ ಕೈಚೀಲ ತರುವವರ ಸಂಖ್ಯೆ ದಿನೇದಿನೆ ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದು ರೋಟರಿ ಐಸಿರಿ ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈಯವರು ತಮ್ಮ ಭಾಷಣದಲ್ಲಿ ತಿಳಿಸಿ, ಸಂತಸ ವ್ಯಕ್ತಪಡಿಸಿದರು.

*(ಮುಂದಿನ ಪುಟಕ್ಕೆ)*



ಕಾರ್ಯಕ್ರಮಕ್ಕೆ ಶುಭ ಹಾರೈಸಿದ ಪಂಚಾಯತ್ ಉಪಾಧ್ಯಕ್ಷೆ ಶ್ರೀಮತಿ ರೂಪಾ ನಾಯಕ್ ಸ್ವಚ್ಛತೆ ಕಾಪಾಡುವುದು ಎಲ್ಲರ ಕರ್ತವ್ಯ ಎಂದರು. ಸಭೆಯಲ್ಲಿ ಉಪಸ್ಥಿತರಿದ್ದ ಪಂಚಾಯತ್ ಸದಸ್ಯ ಶ್ರೀ ರವೀಂದ್ರ ಕಾಮತ್ ಅವರನ್ನು ವೇದಿಕೆಗೆ ಕರೆದು ಹೂ ನೀಡಿ ಗೌರವಿಸಲಾಯಿತು.

ಆರ್.ಸಿ.ಸಿ.ಐಸಿರಿ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀಯವರು ಮಾತನಾಡಿ ಸ್ವಚ್ಛತೆ ಏಕೆ ಬೇಕು ? ಎಲ್ಲೆಲ್ಲಿ ಸ್ವಚ್ಛತೆ ಪಾಲಿಸಬೇಕು ? ಎಂದರೆ ಮೊದಲು ಮನೆಯಿಂದಲೇ ಈ ಕರ್ತವ್ಯ ಪಾಲನೆ ಆಗಬೇಕು. ಸ್ವಚ್ಛತೆ ಎಂದರೆ ಕೇವಲ ಕಸ ವಿಲೇವಾರಿ ಮಾತ್ರವಲ್ಲ, ಬಯಲುಶೌಚವು ಪರಿಸರವನ್ನು ಮಲಿನಗೊಳಿಸುತ್ತದೆ, ದುರ್ವಾಸನೆಯನ್ನು ಉಂಟು ಮಾಡುತ್ತದೆ, ಪರಿಸರ ಮತ್ತು ನೀರಿನ ಮೂಲಗಳು ಕಲುಷಿತಗೊಳ್ಳುತ್ತವೆ, ಸೊಳ್ಳೆಗಳ, ನೊಣಗಳ ಸಂತಾನೋತ್ಪತ್ತಿಗೆ ಕಾರಣವಾಗಿ ರೋಗ ಹರಡುವಿಕೆಯನ್ನು ಹೆಚ್ಚಿಸುತ್ತದೆ. ಬಯಲು ಶೌಚಮುಕ್ತ ಮನೆಗಳಿಂದ ಸ್ವಚ್ಛ ಮತ್ತು ಆರೋಗ್ಯಕರ ಪರಿಸರ ನಿರ್ಮಾಣವಾಗುತ್ತದೆ ಎಂದರು. ಉಡುಪಿ ತಾಲೂಕು ಅಂಗನವಾಡಿ ಶಿಕ್ಷಕರ ಸಂಘದ ಶ್ರೀಮತಿ ಭಾರತಿ ಕುಲಾಲ್ ಮಾತನಾಡಿ, ಅಂಗನವಾಡಿಯಲ್ಲಿ ನಾವು ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಹೇಳಿಕೊಡುತ್ತೇವೆ. ಮನೆಯಲ್ಲಿ ಪೋಷಕರು ಮಕ್ಕಳಿಗೆ ಈ ಬಗ್ಗೆ ತಿಳಿಹೇಳಬೇಕು ಎಂದರು.



ಕಬ್ಯಾಡಿ ಘಟಸಮಿತಿ ಅಧ್ಯಕ್ಷ ಶ್ರೀ ಸುಧಾಕರ್ ಎಸ್. ಕೆ. ಕಾರ್ಯಕ್ರಮದ ಯಶಸ್ಸಿಗೆ ಎಲ್ಲರ ಸಹಕಾರ ಕೋರಿದರು.

ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಅಶೋಕ್ ಕುಮಾರ್, ರೋಟರಿ ಸಮುದಾಯದಳದ ಜಿಲ್ಲಾ ಪ್ರತಿನಿಧಿ ಶ್ರೀ ಜಯರಾಮ ಶೆಟ್ಟಿಗಾರ್, ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘದ ಅಧ್ಯಕ್ಷೆ ಶ್ರೀಮತಿ ಜಯಂತಿ ಸುವರ್ಣ, ರೋಟರಿ ಐಸಿರಿ ಕಾರ್ಯದರ್ಶಿ ರೊ. ಕೃಷ್ಣಪ್ಪ, ಆರ್.ಸಿ.ಸಿ. ಐಸಿರಿ ಕಾರ್ಯದರ್ಶಿ ಶ್ರೀಮತಿ ಶಾರದಾ ಎಸ್., ಕಬ್ಯಾಡಿ ಘಟಸಮಿತಿಯ ಸೇವಾದೀಕ್ಷಿತರಾದ ಶ್ರೀಮತಿ ಅಶ್ವಿನಿ ಹೆರ್ಗ ಮತ್ತು ಶ್ರೀಮತಿ ನಿವೇದಿತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆರ್.ಸಿ.ಸಿ. ಸದಸ್ಯೆಯರಾದ ವಿನಂತಿ ಮತ್ತು ಶಾಂಭವಿಯವರ ಪ್ರಾರ್ಥನೆಯ ಬಳಿಕ. ಕಬ್ಯಾಡಿ ಘಟಸಮಿತಿಯ ಕಾರ್ಯದರ್ಶಿ ಶ್ರೀಮತಿ ಭಾರ್ಗವಿ ಸ್ವಾಗತಿಸಿದರು. ಒಡಿಯೂರು ಶ್ರೀ ಗ್ರಾಮ ವಿಕಾಸ ಯೋಜನೆ ಉಡುಪಿ ವಲಯ ಕಾರ್ಯದರ್ಶಿ ಶ್ರೀಮತಿ ಚಂದ್ರಿಕಾ ಜಯಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು. ಆರ್.ಸಿ.ಸಿ. ನಿಕಟಪೂರ್ವ ಕಾರ್ಯದರ್ಶಿ ಶ್ರೀಮತಿ ಶಾಲಿನಿ ಸಾಮಂತ್ ವಂದನಾರ್ಪಣೆಗೈದರು. ಈ ಸಂಕ್ಷಿಪ್ತ ಸಭಾ ಕಾರ್ಯಕ್ರಮದ ಬಳಿಕ ಪಂಚಾಯತ್ ವಠಾರದಿಂದ ಹಾಲಿನ ಡೈರಿಯವರೆಗೆ ರಸ್ತೆಪಕ್ಕದ ಎರಡೂ ಬದಿಯ ಪ್ಲಾಸ್ಟಿಕ್ ಮತ್ತಿತರ ತ್ಯಾಜ್ಯಗಳ ಬೃಹತ್ ಸ್ವಚ್ಛತಾ ಕಾರ್ಯಕ್ರಮವು ನಡೆಯಿತು.




ರೋಟರಿ ಐಸಿರಿಯ ಸ್ಥಾಪಕ ಕಾರ್ಯದರ್ಶಿ, ರೋಟರಿ ಜಿಲ್ಲಾ RCC ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್ ರವರು ಆಗಸ್ಟ್ 2 ರಂದು ರೋಟರಿ ಮಣಿಪಾಲ ಹಿಲ್ಸ್ ಪ್ರಾಯೋಜಿತ ದೂಮಾವತಿ ರೋಟರಿ ಸಮುದಾಯದಳದ ಪದಪ್ರದಾನ ಸಮಾರಂಭದಲ್ಲಿ ಪದಪ್ರದಾನ ಅಧಿಕಾರಿಯಾಗಿ ಭಾಗವಹಿಸಿದ್ದರು.

ಜುಲೈ 27ರಂದು ಶೆಟ್ಟಿಬೆಟ್ಟು ಶಾಲೆಯಲ್ಲಿ ನಡೆದ ತಾಯಿ – ಮಗು ಅರೋಗ್ಯ ಮಾಹಿತಿ ಹಾಗೂ ಶಿಶು ಸ್ಪರ್ಧೆ – 2025 ಕಾರ್ಯಕ್ರಮಕ್ಕೆ ಭೇಟಿ ನೀಡಿದ ನೆದರ್ಲ್ಯಾಂಡ್ಸ್ ದೇಶದ ಡಾ. ಸೋಫಿಯಾ ಮತ್ತು ಡಾ. ಮಿಖಾ ಜೊತೆಗೆ ನಮ್ಮ ರೋಟರಿ ಐಸಿರಿ ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಮತ್ತು ಕಾರ್ಯದರ್ಶಿ ರೊ. ಕೃಷ್ಣಪ್ಪರವರು ಶಿಶು ಅರೋಗ್ಯ ಕ್ಷೇತ್ರದಲ್ಲಿ ಎರಡೂ ದೇಶಗಳಲ್ಲಿನ ಸ್ಥಿತಿಗತಿ, ಸರಕಾರಿ ಸವಲತ್ತುಗಳ ಬಗ್ಗೆ ಸಂವಾದ ನಡೆಸಿದರು.



## ಬೌದ್ಧಿಕ ಸಿರಿ

ಅವನಿಗೆ ಚಿತ್ರಕಲೆಯ ಬಗ್ಗೆ ತುಂಬಾ ಆಸಕ್ತಿ, ಸುಂದರವಾದ ವರ್ಣಚಿತ್ರಗಳನ್ನು ಮಾಡುತ್ತಿದ್ದನು. ಒಂದು ದಿನ ತಾನು ರಚಿಸಿದ ಅತ್ಯುತ್ತಮ ವರ್ಣಚಿತ್ರವೊಂದನ್ನು ಶಾಲೆಯ ಪ್ರದರ್ಶನದಲ್ಲಿ ಇಡಲು ನಿರ್ಧರಿಸಿದನು. ವರ್ಣಚಿತ್ರದ ಪಕ್ಕದಲ್ಲಿ "**ನಿಮಗೆ ಏನಾದರೂ ತಪ್ಪು ಕಂಡುಬಂದರೆ ದಯವಿಟ್ಟು ಆ ಭಾಗವನ್ನು ಕಪ್ಪು ಬಣ್ಣದಿಂದ ವೃತ್ತ ಮಾಡಿ**" ಎಂದು ಟಿಪ್ಪಣಿಯನ್ನು ಸಹ ಹಾಕಿದನು.

ಸಂಜೆ ನೋಡಲು ಬಂದಾಗ ಇಡೀ ವರ್ಣಚಿತ್ರವು ಕಪ್ಪುವೃತ್ತಗಳಿಂದ ಆವೃತವಾಗಿರುವುದನ್ನು ನೋಡಿ ತುಂಬಾ ದುಃಖಿತನಾಗಿ, ಖಿನ್ನತೆಗೆ ಒಳಗಾದನು. ಏಕೆಂದರೆ ಅದು ಅವನು ಇದುವರೆಗೆ ಮಾಡಿದ ಅತ್ಯುತ್ತಮ ಚಿತ್ರಕಲೆಯಾಗಿತ್ತು.

ತರಗತಿಯ ಶಿಕ್ಷಕರು ಈತ ದುಃಖಿತನಾಗಿರುವುದನ್ನು ಗಮನಿಸಿ  ಕರೆದು, ಕಾರಣವನ್ನು ವಿಚಾರಿಸಿ, ಅವನಿಗೆ ಇನ್ನೊಂದು ವರ್ಣಚಿತ್ರವನ್ನು ಮಾಡಿ ಪ್ರದರ್ಶನಕ್ಕೆ ಇಡಲು ಹೇಳಿದರು, ಆದರೆ ಈ ಬಾರಿ ಅವರು ಚಿತ್ರಕಲೆಯ ಜೊತೆಗೆ "**ದಯವಿಟ್ಟು ಚಿತ್ರಕಲೆಯಲ್ಲಿ ತಪ್ಪೇನಾದರೂ ಕಂಡುಬಂದರೆ ಅದನ್ನು ಸರಿಪಡಿಸಿ**" ಎಂದು ಬರೆದಿದ್ದರು.

ಸಂಜೆ ಅವನು ವರ್ಣಚಿತ್ರವನ್ನು ನೋಡಲು ಬಂದಾಗ, ಯಾವುದೇ ತಿದ್ದುಪಡಿ ಮಾಡಲಾಗಿಲ್ಲ. ಅದನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ಕಾರಣ ಕೇಳಿದಾಗ ಶಿಕ್ಷಕರು ಹೀಗೆ ಉತ್ತರಿಸಿದರು, "ಜನರಿಗೆ, ಇತರರು ಮಾಡಿದ ಕೆಲಸದಲ್ಲಿ ತಪ್ಪುಗಳನ್ನು ಕಂಡುಹಿಡಿಯುವುದು ತುಂಬಾ ಸುಲಭ, ಆದರೆ ಆ ತಪ್ಪನ್ನು ತಾವೇ ಸರಿಪಡಿಸುವ ವಿಷಯಕ್ಕೆ ಬಂದಾಗ, ಯಾರೂ ಸಿದ್ಧರಿರೊಲ್ಲ. ನಾವು ಏನನ್ನಾದರೂ ಮಾಡಲು ಮತ್ತು ನಿರ್ಮಿಸಲು ನಮ್ಮ ಕೈಲಾದಷ್ಟು ಪ್ರಯತ್ನಿಸಿದ ನಂತರವೂ ಕೆಲಜನರು ಅವುಗಳಲ್ಲಿ ತಪ್ಪುಗಳನ್ನು ಕಂಡುಕೊಳ್ಳುತ್ತಲೇ ಇರುತ್ತಾರೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇದರಿಂದ ದುಃಖಿತರಾಗಬಾರದು ಅಥವಾ ಖಿನ್ನತೆಗೆ ಒಳಗಾಗಬಾರದು, ಬದಲಾಗಿ ಹೆಚ್ಚು ಸಾಧಿಸಲು ಶ್ರಮಿಸುತ್ತಲೇ ಇರಬೇಕು."

## ಪ್ರೇರಣಾ ಸಿರಿ: ರೋಟರಿ ಮಾಹಿತಿ



Past Assistant Governor
Rtn. MPHF. Dr. Ganesha A
Treasurer, Rotary Aisiri

Dear Rotarian friends, I am very happy to share following information with respect to Rotary.

As you all know, Rotary is the organisation with group of people from different vocations.

Our **global network** of more than 1.2 million neighbours, friends and leaders volunteer their skills and resources to solve issues and address community needs.

The Rotary's **vision** statement: Together we see a world where people unite and take action to create lasting change across the globe, in our communities and in ourselves.

Our **core values** include Fellowship, Integrity, Diversity, Service and Leadership. It is the core value that the Rotarian inculcate differentiates the Rotarians and the others.

The **seven areas of focus** of Rotary help us to plan and decide the programs and projects. This includes (i) Peace building & Conflict resolution (ii) Disease prevention & Treatment (iii) Water, Sanitation & Hygiene (iv) Maternal & Child Health (v) Basic Education & Literacy (vi) Community Economic Development and (vii) Environment Awareness.

The check for us is the **Four Way test**. Anything we say or do put it in to the test and get it confirmed. One need to pass in all tests. (i) Is it Truth? (ii) Is it Fair to all concerned? (iii) Will it build Goodwill & Better Friendship? and (iv) Will it be beneficial to all concerned? Thus, Rotary help us for our all-round development.

I will conclude with the following note: **Our Knowledge decides what to say, Skill decides how to say, Attitude decides how much to say and Wisdom decides whether to say or not.**

Thank you.



## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 4ನೇ ವಾರದ ಸಭೆ ಜುಲೈ 29ರಂದು RCC ಕಾರ್ಯಾಲಯದಲ್ಲಿ ಜರುಗಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅಧ್ಯಕ್ಷರಿಗೆ ಕೊರಳ ಲಾಂಛನ ತೊಡಿಸಿ, ಅಧ್ಯಕ್ಷರು ಸಭೆ ಆರಂಭಿಸಿದರು. ರೊ. ಗೀತಾಶ್ರೀ ಉಪಾಧ್ಯ ಪ್ರಾರ್ಥನೆ ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಕೃಷ್ಣಪ್ಪ ಕಳೆದ ವಾರದ ವರದಿಯನ್ನು ಮಂಡಿಸಿದರು.

ಅಧ್ಯಕ್ಷರು ಜಿಲ್ಲಾ ಇಂಟರಾಕ್ಟ್ ಅಸೆಂಬ್ಲಿ ಒಂದು ತಿಂಗಳು ಮುಂದೂಡಿದ ಬಗ್ಗೆ ಮಾಹಿತಿ ನೀಡಿದರು. ತಾಯಿ ಮಗುವಿನ ಆರೋಗ್ಯ ಕಾರ್ಯಕ್ರಮದ ಖರ್ಚುವೆಚ್ಚದ ಬಗ್ಗೆ ಸಮುದಾಯ ಸೇವಾ ನಿರ್ದೇಶಕರ ರೊ. ಪ್ರಕಾಶ್ ಶೆಣೈ ವಿವರ ನೀಡಿದರು. ಕೋಶಾಧಿಕಾರಿ ರೊ. ಎ. ಗಣೇಶ್ ರವರು ಪದಪ್ರದಾನ ಕಾರ್ಯಕ್ರಮದ ಖರ್ಚುವೆಚ್ಚವನ್ನು ಮಂಡಿಸಿದರು. ಜೊತೆಗೆ ಕ್ಲಬ್ ನ ಅರ್ಧವಾರ್ಷಿಕ ಶುಲ್ಕವನ್ನು ಅಂತರಾಷ್ಟ್ರೀಯ ರೋಟರಿಗೆ ಪಾವತಿಸಿರುವುದಾಗಿ ಹೇಳಿದರು.

ಅಧ್ಯಕ್ಷರು ಆಗಸ್ಟ್ ತಿಂಗಳಲ್ಲಿ ಯೋಜಿಸಿರುವ ಸಂಭಾವ್ಯ ಕಾರ್ಯಕ್ರಮಗಳ ವಿವರ ನೀಡಿ, ಆಗಸ್ಟ್ 1 ರಂದು ನಡೆಯಲಿರುವ ಬೋರ್ಡ್ ಮೀಟಿಂಗ್ ನಲ್ಲಿ ಈ ಕಾರ್ಯಕ್ರಮಗಳನ್ನು ಚರ್ಚಿಸುವುದಾಗಿ ತಿಳಿಸಿದರು. ಜೊತೆಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ರವರು ಕಾರ್ಯದರ್ಶಿಯವರ ಸಹಕಾರದೊಂದಿಗೆ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ ನಾಲ್ಕನೇ ಆವೃತ್ತಿಯನ್ನು ಬಿಡುಗಡೆಗೊಳಿಸಿದರು.

ಸದಸ್ಯರ ಅವಕಾಶದಲ್ಲಿ ರೊ. ಪ್ರಭಾಕರ್ ಶೆಟ್ಟಿ, ರೊ. ಮಂಜುನಾಥ್ ಉಪಾಧ್ಯ, ರೊ. ಪ್ರಕಾಶ್ ಶೆಣೈ, ರೊ. ಗುರುಪ್ರಸಾದ್ ಕಾಮತ್, ರೊ. ಸುಕೇಶ್ ಕುಂದರ್, ರೊ. ಕೃಷ್ಣಪ್ಪ, ರೊ. ಕೊರಗಪ್ಪ ಶೆಟ್ಟಿಗಾರ್ ಮಾತನಾಡಿ, ತಾಯಿ ಮಗುವಿನ ಆರೋಗ್ಯ ಕಾರ್ಯಕ್ರಮದ ಬಗ್ಗೆ ಅವಲೋಕನ ನಡೆಸಿದರು. ಅಲ್ಲದೆ ಅಕಾಡೆಮಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪುಸ್ತಕ ವಿತರಣೆ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಿಯೋಜಿತ ಅಧ್ಯಕ್ಷ ರೊ. ಸಂದೀಪ್ ಕುಮಾರ್ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಅಧ್ಯಕ್ಷರು ತಮ್ಮ ಮಾತಿನಲ್ಲಿ ಸದಸ್ಯರ ಸಲಹೆಗಳನ್ನು ಸ್ವೀಕರಿಸಿದರು. ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ಮಾಸ್ಟರ್ ಆಕರ್ಷ ನಡೆಸಿದರು. ರೊ ಗುರುಪ್ರಸಾದ್ ಕಾಮತ್ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು. ಕಾರ್ಯದರ್ಶಿಯವರು ವಂದನಾರ್ಪಣೆಗೈದರು. ದಂಡಪಾಣಿ ಕೊರಳ ಲಾಂಛನ ತೆಗೆದ ಬಳಿಕ ಅಧ್ಯಕ್ಷರು ಸಭೆ ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 4ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ ನಾಲ್ಕನೇ ಆವೃತ್ತಿಯನ್ನು ಉಪಸಂಪಾದಕರಾದ ರೊ. ಗುರುಪ್ರಸಾದ್ ಕಾಮತ್ ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರಿಂದ ಬಿಡುಗಡೆಗೊಳಿಸಿದ ಕ್ಷಣ.



ರೋಟರಿ ಐಸಿರಿಯ ಪ್ರತೀ ವಾರದ ಸಭೆಯ ಅಂತ್ಯದಲ್ಲಿ ಚೀಟಿ ಎತ್ತುವ ಮೂಲಕ ಲಕ್ಕಿ ರೊಟೇರಿಯನ್ ಆಯ್ಕೆ ಮಾಡಲಾಗುತ್ತದೆ. ಜುಲೈ 29ರಂದು ನಡೆದ ನಾಲ್ಕನೇ ವಾರದ ಸಭೆಯಲ್ಲಿ ಈ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ಮಾಸ್ಟರ್ ಆಕರ್ಷ ನಡೆಸಿದರು. ರೊ. ಗುರುಪ್ರಸಾದ್ ಕಾಮತ್ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.

## ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು



ಆಗಸ್ಟ್ ಏಳರಂದು ಹುಟ್ಟುಹಬ್ಬ ಆಚರಿಸಲಿರುವ ನಮ್ಮ ಸದಸ್ಯ ರೊ. ನಾಗರಾಜ ನಾಯಕ್ ಅವರಿಗೆ ಹಾರ್ದಿಕ ಶುಭಾಶಯಗಳು




ರೋಟರಿ ಜಿಲ್ಲೆ 3182 ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್ ರವರು ಜುಲೈ 29ರಂದು ಮಣಿಪಾಲ ರೋಟರಿಯ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಿರುವ ಸಂದರ್ಭದಲ್ಲಿ ತೆಗೆದ ಚಿತ್ರ.